ಮೇಲೆ ನೇರವಾದ ಆರೋಪ ಇದೆ. ಅವರು ದೌರ್ಜನ್ಯದಿಂದ ಮಧ್ಯೆ ರಾತ್ರಿ ಒಂದು ಗಂಟೆಯಲ್ಲಿ ಕಾರ್ಖಾನೆಯೊಳಗೆ ನುಗ್ಗಿ ನೌಕರರನ್ನು ಥಳಿಸುವಂಥ ಕಾರ್ಯ ಮಾಡಿದ್ದಾರೆ. ಇದರ ಬಗ್ಗೆ ವಿಚಾರಣೆಯಾಗಬೇಕೆಂದು ಒತಾಯದಿಂದ ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡಿ.ವೈ.ಎಸ್.ಪಿ. ಮಾಲೀಕರ ಪರವಾಗಿದ್ದಾರೆ.

ಅಧ್ಯಕ್ಷರು : ನಿಮ್ಮ ನಿಲುವಳಿ ಸೂಚನೆ, ಅವರಿಗೆ 61ನೇ ವಿಧಿನಿಯಮ ಹೇಗೆ ಅಪ್ಲೈ ಆಗುತ್ತದೆಯೋ, ಅದು ನಿಮಗೂ ಅಪ್ಲೈ ಆಗುತ್ತದೆ. ಏಕೆಂದರೆ ಒಂದು ದಿನದಲ್ಲಿ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಗಳನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಏನು ಸೂಚನೆ ಕೊಟ್ಟರೂ ಸಹಿತ ಅದರಂತೆ ತಲೆಬಾಗಿ ನಡೆಯುವವನು ನಾನು ಇದು ತಮಗೂ ಗೊತ್ತಿದೆ.

ಅಧ್ಯಕ್ಷರು: ನನಗೆ ಅದರ ಬಗ್ಗೆ ಅಪಾರವಾದ ಮೆಚ್ಚುಗೆ ಇದೆ. ತಾವು ನಿಯಮ 61ನ್ನು ನೋಡಿ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರ ಮಾತಿಗೆ ನಾನೂ ಸಹ ತಲೆಬಾಗಿ ನಡೆಯುತ್ತೇನೆ. ದಾಂಡೇಲಿಯಲ್ಲಿ ನಡೆದಿರುವ ಘಟನೆ ಬಗ್ಗೆ ಸರ್ಕಾರ ಏನು ಹೇಳುತ್ತದೆ. ಅಲ್ಲಿ ಕಾರ್ಮಿಕರಿಗೆ ಅನ್ಯಾಯವಾಗಿರುವ ಬಗ್ಗೆ ಸರ್ಕಾರ ಏನು ಹೇಳುತ್ತದೆ

(ಗೊಂದಲ)

ಅಧ್ಯಕ್ಷರು : ನೀವು ಹೇಳುವುದನ್ನು ಹೇಳಿದ್ದೀರಿ. ಸರ್ಕಾರದವರು ನೋಡುತ್ತಾರೆ ಆದರೆ ನಿಮ್ಮ ನಿಲುವಳಿ ಸೂಚನೆಯನ್ನು ಒಪ್ಪಿಲ್ಲ. ನಿಲುವಳಿ ಸೂಚನೆ ಬಿಟ್ಟು ಬೇರೆ ರೀತಿಯಲ್ಲಿ ಏನಾದರೂ ಬರುತ್ತದೆಯೇ ಎಂಬುದನ್ನು ನೋಡೋಣ.

ಬಿಜಾಪುರ ಜಿಲ್ಲೆ ಬೀಳಗಿ ತಾಲ್ಲೂಕಿನಲ್ಲಿ ಕಾನೂನು ಪರಿಸ್ಥಿತಿ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ತಾವು ಹೇಳಿರತಕ್ಕ ಸೂಚನೆಯನ್ನು ಒಪ್ಪಿ ಖಂಡಿತವಾಗಿಯೂ ಅದಕ್ಕೆ ತಲೆಬಾಗಿ ನಡೆಯುತ್ತೇನೆ. ಆದರೆ ಈಗ ನಾನು ಹೇಳುವ ವಿಷಯ ಬಹಳ ಮಹತ್ವದ್ದಾಗಿರುವುದರಿಂದ ಬಿಜಾಪುರ ಜಿಲ್ಲೆ ಬೀಳಗಿ ತಾಲ್ಲೂಕಿನಲ್ಲಿ ಕಾನೂನು ಪರಿಸ್ಥಿತಿ ಬಿಗಡಾಯಿಸತಕ್ಕ ಸಂಭವ ಇರುವುದರಿಂದ ಮತ್ತು ನಾಳೆ ದಿನ ಅಧಿವೇಶನ ಮುಗಿಯುವ ಸಂದರ್ಭ ಇರುವುದರಿಂದ ಇದನ್ನು ಹೇಳಬೇಕಾಗಿವೆ. ಮಾನ್ಯ ಕೆ.ಹೆಚ್. ಪಾಟೀಲರು ಮುಖ್ಯವಾಗಿ ಆ ಭಾಗದ ಸಚಿವರೂ ಹಿರಿಯ ಮುಖಂಡರೂ ಆಗಿದ್ದಾರೆ. ಬೀಳಗಿ ತಾಲ್ಲೂಕಿನಲ್ಲಿ ಸುಮಾರು 10 ಕೋಟಿ ರೂಪಾಯಿ ಬೆಳೆ ಇದೆ. ಇನ್ನು 8 ದಿವಸದಲ್ಲಿ ಘಟಪ್ರಭಾ ಎಡದಂಡೆ ನಾಲೆಯಿಂದ ನೀರನ್ನು ಕೊಡದೇಹೋದರೆ ಆ 10 ಕೋಟಿ ರೂಪಾಯಿ ಬೆಳೆ ಹಾಳಾವುದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ.

ಅಧ್ಯಕ್ಷರು : ಈ ಬೀಳಗಿ ವಿಚಾರವನ್ನು ಬಾಬಾಗೌಡ ಪಾಟೀಲರೂ ಕಳುಹಿಸಿದ್ದಾರೆ ಇದು ಇವತ್ತು ಬರುವುದಿಲ್ಲ ನಾಳೆಗೆ ಗಮನ ಸೆಳೆಯುವ ಸೂಚನೆಗೆ ಬರುತ್ತವೆಯೋ ಏನೋ ನೋಡೋಣ ಇವತ್ತೇ ತೆಗೆದುಕೊಳ್ಳುವುದಕ್ಕೆ ಇನ್ನೂ ಅವರಿಗೆ ನಾವು ನೋಟೀಸ್ ಕಳುಹಿಸಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕಳೆದ 4-5 ದಿವಸಗಳಿಂದ ಸಾವಿರಾರು ಜನ ರೈತರು ಈ ಬಗ್ಗೆ ಧರಣಿ ಕುಳಿತಿದ್ದಾರೆ ಇವತ್ತೂ ಧರಣಿ ಕುಳಿತಿದ್ದಾರೆ ನಿನ್ನೆಯೂ

ಸಹಿತ ಧರಣಿ ಕುಳಿತಿದ್ದರು. ಅಲ್ಲಿರತಕ್ಕ ಶಾಸಕರುಗಳಾದ ಯಲ್ಲಿಗುಟ್ಟಿ ಅಂದರೆ ಸರ್ ನಾಯಕ್ ಬಾಬಾಗೌಡ ಪಾಟೀಲರೂ ಸಹಿತ ಧರಣಿಯಲ್ಲಿ ಪಾಲ್ಗೊಂಡಿದ್ದರು. ಇದು ಬಹಳ ದೊಡ್ಡ ಸಮಸ್ಯೆಯಾಗಿ ಉದ್ಭವವಾಗತಕ್ಕ ಪ್ರಶ್ನೆ ಅಲ್ಲಿ ಬರುತ್ತದೆ. ಅಲ್ಲಿನ ರೈತರಿಗೆ 2-3 ದಿವಸದಲ್ಲಿ ನೀರನ್ನು ಬಿಡುಗಡೆ ಮಾಡದೇಹೋದರೆ, ಸಂಪೂರ್ಣವಾಗಿ ಬೆಳೆ ನಾಶ ಆಗುವುದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ. 10 ಕೋಟಿ ರೂಪಾಯಿಗೂ ಹೆಚ್ಚು ಬೆಲೆ ಬಾಳುವ ಬೆಳೆ ಬೆಳೆದು ನಿಂತಿದೆ. ಈಗ ಬಾಕಿ ವಿಷಯಗಳು ಏನೇ ಇರಲಿ ಇದೊಂದುಸಾರಿ ನೀರನ್ನು ಬಿಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಾಬಾಗೌಡ ಪಾಟೀಲ್ : ಅಲ್ಲಿ ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂದರೆ ಅಲ್ಲಿನ ರೈತರು ಒಂಟಿ ಕಾಲಿನಲ್ಲಿ ನಿಂತು ಧರಣಿ ಮಾಡುತ್ತಿದ್ದಾರೆ.

ಶ್ರೀ ಟಿ.ಎಂ. ಮಂಜುನಾಥಸ್ವಾಮಿ : ಅಧ್ಯಕ್ಷರೇ, ನಾನು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಇದು ಬಹಳ ಪ್ರಮುಖವಾದ ವಿಚಾರ

ಶ್ರೀ ವಾಟಾಳ್ ನಾಗರಾಜ್ : ಗ್ರಾಮೀಣ ಪ್ರದೇಶಗಳಿಗೆ ಪ್ರತಿ ದಿನ 6 ಗಂಟೆಗಳ ಕಾಲ ವಿದ್ಯುತ್ ನಿಲ್ಲಿಸಬೇಕೆಂದು ಹೇಳಿ.

ಅಧ್ಯಕ್ಷರು : ಇದನ್ನೂ ನಾಳೆ ದಿವಸ ಯಾವುದಾದರೊಂದು ರೂಪದಲ್ಲಿ ತೆಗೆದುಕೊಳ್ಳೋಣ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ ನಾಳೆ ಇದನ್ನು ಪ್ರಸ್ತಾಪ ಮಾಡಿ.

ಶ್ರೀ ಟಿ.ಎಂ. ಮಂಜುನಾಥ್ : ಅಧ್ಯಕ್ಷರೇ ಅತ್ಯಂತ ವಿನಯಪೂರ್ವಕವಾಗಿ ಮನವಿ ಮಾಡುತ್ತಿದ್ದೇನೆ. ತಿಪಟೂರಿನಲ್ಲಿ ಬಹಳ ಗಂಭೀರ ಪರಿಸ್ಥಿತಿ ಉಂಟಾಗಿದೆ. ಕಳ್ಳ ನೋಟುಗಳ ಹಾವಳಿಯಿಂದ ಕಳ್ಳ ನೋಟುಗಳು ಬಹಳ ಗಂಭೀರ ಪರಿಸ್ಥಿತಿ ಉಂಟಾಗಿದೆ. ಕಳ್ಳ ನೋಟುಗಳ ಈ ಕಳ್ಳ ನೋಡುಗಳ ಚಲಾವಣೆಯಿಂದ ಇವತ್ತು ತಿಪಟೂರಿನಲ್ಲಿ ತಾಲ್ಲೂಕಿನಲ್ಲಿ ಭೀಕರ ಪರಿಸ್ಥಿತಿ ಉಂಟಾಗಿದೆ. ತಿಪಟೂರಿಗೆ ಬರತಕ್ಕಂಥ ರೈತರಿಗೆ 10 ರೂಪಾಯಿನ ಕಳ್ಳನೋಟುಗಳನ್ನು ಕೊಡುತ್ತಿದ್ದಾರೆ. ಇದರಿಂದ ರೈತರು ಕಂಗಾಲಾಗಿದ್ದಾರೆ. ದಯವಿಟ್ಟು ಸರಕಾರದ ಗಮನ ಸೆಳೆಯಬೇಕೆಂದು ಬಹಳ ದಿವಸದ ಹಿಂದೆಯೇ ಬರೆದು ಕಳುಹಿಸಿದ್ದೇನೆ. ಅಷ್ಟೇ ಅಲ್ಲ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ : ಮೈಸೂರು ನಗರದ ಅಂಧೋಲನ ದಿನಪತ್ರಿಕೆ ಕಚೇರಿಗೆ ವಿದ್ಯಾರ್ಥಿಗಳು ನುಗ್ಗಿ ಕಛೇರಿಯನ್ನು ಒಡೆದು ಹಾಕಿದ್ದಾರೆ. ಪೋಲೀಸರ ರಕ್ಷಣೆ ಸಿಕ್ಕಿಲ್ಲ.

(ಗೊಂದಲ)

ಗೋಪಿನಾಥ್ ಆರ್. ಸಾಂದ್ರ : ಅಧ್ಯಕ್ಷರೇ ನಾನು ಈಗಾಗಲೇ ಒಂದು ಕಾಲ್ ಅಟೆನ್‌ಷನ್ ಮೋಷನ್ ಕಳುಹಿಸಿದ್ದೇನೆ. ಹುಬ್ಬಳಿಯ ಮಹದೇವ ಟೆಕ್ಸ್‌ಟೈಲ್ಸ್ ಮಿಲ್ಸ್ ಬಗ್ಗೆ ಕಳುಹಿಸಿದ್ದು ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ. ಅಲ್ಲಿ ನನ್ನ ಮನೆ ಮುಂದೆ ಎರಡು ಮೂರು ಸಾವಿರ ಜನ ಘೆರಾವು ಮಾಡುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಅಶಾಂತಿ ಉಂಟಾಗುವಂತಹ ಪ್ರಸಂಗ ಇದೆ. ದಯವಿಟ್ಟು ಕೂಡಲೇ ಇದನ್ನು ನೀವು ತೆಗೆದುಕೊಳ್ಳಬೇಕು. ಕನಿಷ್ಟಪಕ್ಷ ನಾಳೆಯಾದರೂ ಈ ಗಮನ ಸೆಳೆಯುವ ಸೂಚನೆಗೆ ಪರವಾನಗಿ ಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಈಗ ಬಂದಿದೆ ಅದನ್ನು ನಾನು ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆಂದೋಲನ ಪತ್ರಿಕಾ ಕಛೇರಿಗೆ ಕೂಡಲೇ ಸರಕಾರ ರಕ್ಷಣೆ ಕೊಡಲಿ; ಆಮೇಲೆ ಚರ್ಚೆ ಮಾಡೋಣ. ಪೊಲೀಸರು ನಿಷ್ಷೇಯರಾಗಿದ್ದಾರೆ. ಪತ್ರಕರ್ತರ ಮೇಲೆ ದಾಂಧಲೆ ಆಗಿದೆ. ರಕ್ಷಣೆ ಕೊಡಿ ಸ್ವಾಮಿ.

(ಗೊಂದಲ)

ಅಧ್ಯಕ್ಷರು : ಇಬ್ಬರು ಮೂರು ಜನರು ಒಟ್ಟಿಗೆ ಮಾತನಾಡಿದರೆ ನಾನು ಯಾರಿಗೆ ರಕ್ಷಣೆ ಕೊಡಲಿ? ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ಎಂ.ಪಿ. ವೆಂಕಟೇಶ : ದಿನಾಂಕ 23.12.90 ರಂದು ಮೈಸೂರಿನ ಆಂದೋಲನ ದಿನಪತ್ರಿಕೆ ಕಛೇರಿ ಮೇಲೆ ಹಲ್ಲೆ ಆಗಿದೆ.

ಅಧ್ಯಕ್ಷರು : ಅದು ಈಗ ಬಂದಿದೆ ನೋಡುತ್ತೇನೆ. ಎಷ್ಟು ಹೊತ್ತಿಗೆ ಬಂದಿದೆ ಎಂದರೆ 26ನೇ ತಾರೀಖು ಅಂದರೆ ಇವತ್ತು ಬಂದಿದೆ ಅದನ್ನು ನಾನು ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಇದನ್ನು ಚರ್ಚೆಗೆ ತೆಗೆದುಕೊಳ್ಳುವವರೆಗೆ ಪೊಲೀಸರಿಗೆ ಹೇಳಿ ಅವರಿಗೆ ರಕ್ಷಣೆ ಕೊಡುವುದಕ್ಕೆ ಏರ್ಪಾಡು ಮಾಡಬೇಕು.

ಅಧ್ಯಕ್ಷರು : ಎಲ್ಲರಿಗೂ ರಕ್ಷಣೆ ಕೊಡುತ್ತಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೇ

ಅಧ್ಯಕ್ಷರು : ಬರೆದು ಕಳುಹಿಸಿದ್ದೀರಾ? ಯಾವಾಗ ಕಳುಹಿಸಿದ್ದೀರಿ?

ಶ್ರೀ ಎ. ರುಕ್ಮಯ್ಯ ಪೂಜಾರಿ : ಇವತ್ತು ಬೆಳಗ್ಗೆ ಕಳುಹಿಸಿದ್ದೇನೆ.

ಅಧ್ಯಕ್ಷರು : ಏನು ವಿಷಯ?

ಶ್ರೀ ಎ. ರುಕ್ಮಯ್ಯ ಪೂಜಾರಿ: ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿರುವ ಮೂರು ಟ್ರಾನ್ಸ್‌ಫಾರ್ಮ್‌ಗಳ ಪೈಕಿ ಎರಡು ಸುಟ್ಟು ಹೋಗಿ ಪೂರ್ಣ ಹಾಳಾಗಿದೆ.

ಅಧ್ಯಕ್ಷರು : ಮೂರು ಟ್ರಾನ್ಸ್‌ಫಾರ್ಮರ್ ಇದೆ ಅದರಲ್ಲಿ ಎರಡು ಹಾಳಾಗಿದೆ ಒಂದು ಕೆಲಸ ಮಾಡುತ್ತಿದೆ. ಸರಕಾರಕ್ಕೆ ಕಾಗದ ಬರೆದು ಕಳುಹಿಸಿ ರಿಪೇರಿ ಮಾಡುತ್ತಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಸ್ವಾಮಿ ಅಲ್ಲಿ ಡೀಸೆಲ್ ಕೊರತೆ ಇದೆ ಅಲ್ಲಿ ಚಿಮಣಿ ಎಣ್ಣೆ ಕೊರತೆ ಇದೆ. ಜೊತೆಗೆ ವಿದ್ಯುತ್ ಕೊರತೆ ಇದೆ ರೈತರು ಬೆಳೆಗಳಿಗೆ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ದಯವಿಟ್ಟು ಸರಕಾರಕ್ಕೆ ಒಂದು ಕಾಗದ ಬರೆದರೆ ತಕ್ಷಣ ಅವರು ರಿಪೇರಿಗೆ ಏರ್ಪಾಡು ಮಾಡುತ್ತಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮೂರು ತಿಂಗಳಾಯಿತು ಇಲಾಖೆಯವರು ಟ್ರಾನ್ಸ್‌ಫಾರ್ಮರ್ ಇಲ್ಲ ಎಂದು ಉತ್ತರ ಕೊಡುತ್ತಿದ್ದಾರೆ. ಅಲ್ಲಿ ಡೀಸೆಲ್ ಕೊರತೆ ಇದೆ ಚಿಮಣಿ ಎಣ್ಣೆ ಕೊರತೆ ಇದೆ. ವಿದ್ಯುತ್ ಕೊರತೆ ಇದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎರಡು ಟ್ರಾನ್ಸ್‌ಫಾರ್ಮರ್ ಕೆಟ್ಟು ಹೋಗಿ ಮೂರು ತಿಂಗಳಾಗಿದೆ. ಬಂಟವಾಳ ತಾಲ್ಲೂಕಿನಲ್ಲಿ ರೈತರಿಗೆ ಬಹಳ ಕಷ್ಟವಾಗಿದೆ

ಸರಕಾರ ತೀವ್ರ ಕ್ರಮ ತೆಗೆದುಕೊಳ್ಳಬೇಕು ಸ್ಪೇರ್ ಟ್ರಾನ್ಸ್‌ಫಾರ್ಮರ್ ಆದರೂ ಇಟ್ಟುಕೊಳ್ಳಬೇಕು

ಶ್ರೀ ಎಂ.ಪಿ. ಈಶ್ವರಪ್ಪ : ಬೇರೆ ವ್ಯವಸ್ಥೆ ಮಾಡಿಕೊಟ್ಟರೆ ರೈತರು ಬದುಕುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶಿಕ್ಷಣ ಸಚಿವರು ಅದೇ ಜಿಲ್ಲೆಯವರು ಏನೋ ಉತ್ತರ ಕೊಡುವುದಕ್ಕೆ ಅವರು ಹೊರಟಿದ್ದಾರೆ.

ಶ್ರೀ ಎಂ ವೀರಪ್ಪ ಮೊಯಿಲಿ : ಮಾನ್ಯ ಸದಸ್ಯರಾದ ಶ್ರೀ ರುಕ್ಮಯ್ಯ ಪೂಜಾರಿಯವರು ಏನು ವಿಚಾರ ಎತ್ತಿದರು, ಈ ಬಗ್ಗೆ ಕಳಿದವಾರ ನಿಯಮ 334ರ ಮೆರೆಗೆ ಒಂದು ಪ್ರಶ್ನೆ ಬಂತು ಅದಕ್ಕೆ ನಾನು ಉತ್ತರ ಕೊಟ್ಟಿದೆ. ಸನ್ಮಾನ್ಯ ವಿಜಯಕುಮಾರ್ ಶೆಟ್ಟಿಯವರು ಈ ವಿಚಾರ ಎತ್ತಿದ್ದರು. ಅಲ್ಲಿ ಟ್ರಾನ್ಸ್‌ಫಾರ್ಮರ್ ಒಡೆದು ಹೋದುದು ಹೌದು. ಅದನ್ನು ರಿಪ್ಲೇಸ್ ಮಾಡಬೇಕಾದರೆ ಈಗ ಬೇರೆಯದು ಇಲ್ಲ. ಈಗ ಎನ್.ಜಿ.ಇ.ಎಫ್.ನಲ್ಲಿ ಬೇರೆ ಕಡೆಗೆ ಎಂದು ಒಂದು ಟ್ರಾನ್ಸ್‌ಫಾರ್ಮರ್ ತಯಾರಾಗುತ್ತಿದೆ. ಅದು 20 ದಿವಸಗಳಲ್ಲಿ ಸಿದ್ಧವಾಗುತ್ತದೆ. ಅದು ತಯಾರು ಆದ ಕೂಡಲೇ ಅದನ್ನೇ ಸಾಗಿಸುತ್ತೇವೆ. ಇದರ ಬಗ್ಗೆ ವ್ಯವಸ್ಥೆಯನ್ನು ಈಗಾಗಲೇ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದವರು ಒಂದು ಸ್ಪೇರ್ ಟ್ರಾನ್ಸ್‌ಫಾರ್ಮರ್ ಇಟ್ಟುಕೊಳ್ಳುವುದು ಬೇಡವೇ?

ಶ್ರೀ ಎಂ. ರುಕ್ಮಯ್ಯ ಪೂಜಾರಿ : ಇದು ಸರ್ಕಾರದ ಬೇಜವಾಬ್ದಾರಿಯನ್ನು ತೋರಿಸುತ್ತದೆ. ಸರ್ಕಾರ ಆದಷ್ಟು ಬೇಗ ಟ್ರಾನ್ಸ್‌ಫಾರ್ಮರ್ಸ್‌ನ್ನು ರಿಪೇರಿ ಮಾಡಿಸಿ ತೊಂದರೆಯಾಗಿರುವ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಅದೇನೆಂದರೆ ಚಿಕ್ಕಬಳ್ಳಾಪುರ ತಾಲ್ಲೂಕಿನ ಹೊನ್ನೆನಹಳ್ಳಿ ಗ್ರಾಮದಲ್ಲಿ

ಅಧ್ಯಕ್ಷರು : ತಾವು ವಿಧಿ ಬಿಂದು 61ಅನ್ನು ನೋಡಿ ನಾನು ಸದನದ ಕಾರ್ಯಕಲಾಪಗಳ ನಡವಳಿಕೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ನಿಯಮ 61ನ್ನು ಒಂದು ಸಾರಿ ಓದಿಕೊಂಡು ಬಂದು ನಾಳೆ ನನಗೆ ಉತ್ತರ ಹೇಳಿ.

ಶ್ರೀ ಸಿ. ಬೈರೇಗೌಡ : ಎರಡು ನಿಮಿಷ ಅಧ್ಯಕ್ಷರೇ,

ಅಧ್ಯಕ್ಷರು : ಅದಕ್ಕಾಗಿ ನಾನು ಅದನ್ನೇ ಸಸ್ಪೆಂಡ್ ಮಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ: ರೂಲ್ಸ್‌ನ್ನು ಸಸ್‌ಪೆಂಡ್ ಮಾಡತಕ್ಕಂಥ ಅಧಿಕಾರ ತಮಗೆ ಇದೆ.

ಅಧ್ಯಕ್ಷರು : ಅದು ಅತ್ಯಂತ ಸ್ಥಳೀಯ ಸಮಸ್ಯೆ.

ಶ್ರೀ ಸಿ. ಬೈರೇಗೌಡ : ಅಲ್ಲಿನ ತಹಶೀಲ್ದಾರ್ ಅವರು

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ನಮಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು, ಕಾರಣವೇನೆಂದರೆ ಈ ಸರ್ಕಾರದಲ್ಲಿ ದಿನಕ್ಕೊಂದು ಸಮಸ್ಯೆಗಳು ಇವೆ. ಒಂದು ಟ್ರಾನ್ಸ್‌ಫಾರ್ಮರ್‌ನ್ನು ರಿಪೇರಿ ಮಾಡಿಸಲು ಈ ಸರ್ಕಾರದಲ್ಲಿ ಆಗುತ್ತಿಲ್ಲ. ಆದ್ದರಿಂದ ತಾವು ಇರತಕ್ಕಂಥ ರೂಲ್ಸ್‌ನ್ನು ಸಸ್‌ಪೆಂಡ್ ಮಾಡಿ ನನಗೆ ಅವಕಾಶ ಮಾಡಿಕೊಟ್ಟರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಚರ್ಚೆ ಮಾಡುವುದಕ್ಕೆ ಸಾಕಾಗುವಷ್ಟು ಸಮಸ್ಯೆಗಳು ಇವೆ.

ಶ್ರೀ ಸಿ ಬೈರೇಗೌಡ : ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ನನ್ನ ಸಹಾಯಕ್ಕೆ ಬಂದರು ಅದೇ ರೀತಿ ತಾವು ಸಹ ನನ್ನ ನೆರವಿಗೆ ಬರಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ 10 ಜನರಿಗೆ ಸರ್ವೆ ನಂಬರ್ 39ರಲ್ಲಿ ಸೈಟ್‌ಗಳನ್ನು ಕೊಟ್ಟಿದ್ದಾರೆ. ಅದೂ ತೀರ ನಿರ್ಗತಿಕರಾಗಿರತಕ್ಕಂಥ ಕಡುಬಡವರಿಗೆ ಸೈಟ್‌ಗಳನ್ನು ಕೊಟ್ಟಿದ್ದಾರೆ ಮತ್ತೆ ಅವರು ಮಂಡಲ ಪಂಚಾಯಿತಿಯಿಂದ ಲೈಸೆನ್ಸ್ ಪಡೆದುಕೊಂಡು ಅಲ್ಲಿ ಸಣ್ಣ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಅಲ್ಲಿನ ತಹಶೀಲ್ದಾರರು ಹೋಗಿ ಅವುಗಳನ್ನು ಕೆಡವಿ ನೆಲಸಮ ಮಾಡಿದ್ದಾರೆ ಮತ್ತು ಮೇಲ್ಮನೆ ಸದಸ್ಯರೊಬ್ಬರ ಮೇಲೆ ಕೇಸ್ ಸಹ ಹಾಕಿದ್ದಾರೆ. ಅವರ ಮೇಲೆ ಒಂದು ಕಂಪ್ಲೆಂಟ್ ರಿಜಿಸ್ಟರ್ ಮಾಡತಕ್ಕಂಥ ಮಟ್ಟಕ್ಕೆ ಸಹ ಹೋಗಿದ್ದಾರೆ. ಅವರು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿ ಆದರೆ ಅವರಿಗೆ ನೋಟೀಸ್ ಕೊಟ್ಟಿಲ್ಲ ಎಂತಾದ್ದೂ ಇಲ್ಲ, ತೀರ ಕಡು ಬಡವರ ಮನೆಗಳನ್ನು ನೆಲಸಮ ಮಾಡಿ ಆ ಬಡವರನ್ನು ಇವತ್ತು ಹಾಳು ಮಾಡಿದ್ದಾರೆ. ಇದಕ್ಕೆ ಬಲವಾದ ಕಾರಣವೇನೆಂದರೆ ಈ ಜಾಗದ ಪಕ್ಕದಲ್ಲಿ ಬಲಿಷ್ಟರೊಬ್ಬರ ಜಮೀನು ಇದು ಅವರು ಈಗಾಗಲೇ ಈ ಜಮೀನಿನಲ್ಲಿ ಒತ್ತುವರಿ ಮಾಡಿದ್ದಾರೆ. ಅದರ ಜೊತೆಗೆ ಇನ್ನೂ ಹೆಚ್ಚು ಜಾಗ ಸೇರಿಸಿಕೊಳ್ಳುಬೇಕು ಎನ್ನುವ ಉದ್ದೇಶದಿಂದ ಇವೆಲ್ಲಾ ಮಾಡುತ್ತಿದ್ದಾರೆ. ಆದ್ದರಿಂದ ಈ ವಿಷಯದ ಮೇಲೆ ನಾವು ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಾ ಇವರ ಮೇಲೆ ತೀವ್ರತರವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಆ ಕಡುಬಡವರಿಗೆ ರಕ್ಷಣೆ ಕೊಡಬೇಕಾಗುತ್ತದೆ. ಜಮೀನು ಇಲ್ಲದೆ ಇರುವವರಿಗೆ ಮನೆ ಇಲ್ಲದೆ ಇರುವವರಿಗೆ ಸೈಟ್ ಕೊಟ್ಟಿದ್ದು ಅವರಿಗೆ ರಕ್ಷಣೆ ಕೊಡುವ ಅವಶ್ಯಕತೆ ಇದೆ. ಸರ್ಕಾರದವರು ಈಗ ಎನೋ ಸೈಟ್ ಇಲ್ಲದವರಿಗೆ ಸೈಟ್ ಕೊಡುತ್ತೇವೆ ಎನ್ನುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆಂದು ಹೇಳುವುದು ಇನ್ನೊಂದು ಕಡೆ ಸೈಟ್ ಇಲ್ಲದೆ ಇರುವವರು ಮನೆ ಕಟ್ಟಿ ಕೊಂಡಿರುವುದನ್ನು ನೆಲಸಮ ಮಾಡುವುದು ಸರಿಯೇ? ಆ ಬಡವರಿಗೆ ನೋಟೀಸ್ ಕೊಟ್ಟಿಲ್ಲ ಏನೂ ಇಲ್ಲ. ಇಂತಹ ಅಧಿಕಾರಿಗಳ ಮೇಲೆ ಸರ್ಕಾರದ ಹಿಡಿತ ಬಹುದೇನೂ? ಇವರ ಮೇಲೆ ಯಾರಿಗೂ ಹಿಡಿತ ಇಲ್ಲದೆ ಆ ಅಧಿಕಾರಿಗಳು ತಮ್ಮ ಸ್ವೇಚ್ಚಾಚಾರವಾಗಿ ಮತ್ತು ಮನಸ್ಸಿಗೆ ಬಂದ ಹಾಗೆ ಲೂಟಿ ಮಾಡಬಹುದೇನೂ? ಇವರ ಮೇಲೆ ಯಾರಿಗೂ ಹಿಡಿತ ಇಲ್ಲವೇನು? ಅವರು ಎಷ್ಟು ಹೊತ್ತಿನಲ್ಲಿ ಆದರೂ ಹೋಗಿ ಕಟ್ಟಿರತಕ್ಕಂಥ ಮನೆಗಳನ್ನು ನೆಲಸಮ ಮಾಡಬಹುದೇನೂ? ಆ ಅಧಿಕಾರಿ ಇವತ್ತು ಸ್ವೇಚ್ಚಾಚಾರವಾಗಿ ವರ್ತಿಸಿದ್ದಾರೆ. ಇದನ್ನು ಹೀಗೆ ಮುಂದುವರಿಯಲು ಬಿಟ್ಟರೆ ಎಲ್ಲಾ ಅಧಿಕಾರಿಗಳಲ್ಲಿ ಈ ಪ್ರವೃತ್ತಿ ಬೆಳೆದು ಬರುತ್ತದೆ. ಆದ್ದರಿಂದ ಇವತ್ತು ಸರ್ಕಾರ ಈ ಅಧಿಕಾರಿ ಮೇಲೆ ಹಿಡಿತ ಇಟ್ಟುಕೊಳ್ಳಬೇಕು. ಯಾವ ರೀತಿಯಲ್ಲಿ ಆ ಕಡುಬಡವರಿಗೆ ರಕ್ಷಣೆ ಕೊಡುತ್ತೀರಿ. ಈ ಬಗ್ಗೆ ಸರ್ಕಾರ ಎನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎಂದು ಕೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಗ್ರಾಮಾಂತರ ಪ್ರದೇಶಗಳ ಬಗ್ಗೆ ಇಲ್ಲಿ ಮಾತನಾಡುವುದು ಮಾಮೂಲಿ ಆಗಿದೆ. ಇದು ಬರೀ ನನ್ನ ಒಂದು ತಾಲ್ಲೂಕಿಗೆ ಮಾತ್ರ ಸೀಮಿತವಲ್ಲ ಈಗ ನನ್ನ ಚಾಮರಾಜ ನಗರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು ಸರಿ ಇಲ್ಲದ ಕಾರಣದಿಂದ ಒಂದ ಕೋಟಿ ರೂಪಾಯಿಗಳ ಬೆಳೆ ನಾಶವಾಗಿದೆ.

ಅಧ್ಯಕ್ಷರು : ತಮ್ಮ ನೋಟೀಸ್ ಬಂದಿದೆ. ನಾನು ಅದನ್ನೇ ಪರಿಶೀಲನೆ ಮಾಡುತ್ತಿದ್ದೇನೆ ಈ ಸದನ ನಾಳೆ ಸಹ ಸಮಾವೇಶಗೊಳ್ಳುದರಿಂದ ನಾಳೆ ತಾವು

ಇದನ್ನು ರೈಜ್ ಮಾಡಲು ಅವಕಾಶ ಕೊಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್ ತಿದ್ದುಪಡಿ ಮಸೂದೆ ಮೇಲೆ ಈಗಾಗಲೇ 215 ನಿಮಿಷಗಳ ಕಾಲ ಚರ್ಚೆಮಾಡಿದ್ದಾರೆ. ಇನ್ನೂ ತಾವು ಎಷ್ಟು ನಿಮಿಷ ಮಾತನಾಡಬೇಕೆಂದು ತೀರ್ಮಾನ ಮಾಡಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಮಸೂದೆಗೆ ತಿದ್ದುಪಡಿಯನ್ನು ಹಾಕಿದ್ದೇನೆ ನಾನು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಬೇಕೆಂದು. ನಾನು ಒಬ್ಬ ಸದಸ್ಯನಾಗಿ ತಿದ್ದುಪಡಿಯನ್ನು ಕೊಟ್ಟಿದ್ದೇನೆಯೇ ಹೊರತು ಪಕ್ಷದ ನಾಯಕನಾಗಿ ಅಲ್ಲ. ಆದ್ದರಿಂದ ಹೆಚ್ಚು ಟೈಮ್ ಬೇಕು.

ಅಧ್ಯಕ್ಷರು : ನೀವು ಎಲ್ಲಿಗೆ ಗೆರೆ ಎಳೆಯುತ್ತೀರಿ? ನಿಮ್ಮ ಸದಸ್ಯತ್ವಕ್ಕೂ ನಿಮ್ಮ ನಾಯಕತ್ವಕ್ಕೂ ಎಲ್ಲಿ ಗೆರೆ ಎಳೆಯುತ್ತೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಮೂರು ತಿದ್ದುಪಡಿಗಳು ಬಂದಿವೆ. ಅದೂ ತಿದ್ದುಪಡಿಗಳ ಮೇಲೆ ತಿದ್ದುಪಡಿಗಳು ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಬೇಕೆಂದು ಮತ್ತೊಂದು ಸೆಲೆಕ್ಟ್ ಕಮಿಟಿ ಕಳುಹಿಸಿ ಕೊಡಿ ಎಂದು ಇನ್ನೊಂದು ಪಬ್ಲಿಕ್ ಒಪೀನಿಯನ್‌ಗೆ ಕಳುಹಿಸಿಕೊಡಿ ಎಂದು ನಮ್ಮ ಪಕ್ಷದ ವತಿಯಿಂದಲೇ ತಿದ್ದುಪಡಿಗಳು ಬಂದಿವೆ.

ಈ ಮೂರು ತಿದ್ದುಪಡಿಗಳ ಮೇಲೆ ನಾವು ಸಾಕಷ್ಟು ಬೆಳಕು ಚೆಲ್ಲಿ ತಮ್ಮ ಮನ ಒಲಿಸಬೇಕಾಗುತ್ತದೆ. ಮತ್ತು ಇದು ಜಂಟಿ ಸಲಹಾಸಮಿತಿಗೆ ಹೋಗಬೇಕೆಂದು ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನನಗೆ 90 ನಿಮಿಷಳ್ ಮಾತನಾಡುವುದಕ್ಕೆ ಅವಕಾಶ ಕೊಡಿ. ಅಷ್ಟು ಕೊಟ್ಟರೆ ಸಾಕು ಸ್ವಾಮಿ.

ಅಧ್ಯಕ್ಷರು : ಸರ್ವೇಸಾಮಾನ್ಯವಾಗಿ ಪಾರ್ಲಿಮೆಂಟರಿ ಪ್ರಾಕ್ಟಿಸ್ ಏನೆಂದರೆ, ಒಂದು ಮಸೂದೆ ಮೇಲೆ ಚರ್ಚೆ ಪ್ರಾರಂಭವಾದಾಗ ಇಂಥಾ ತಿದ್ದುಪಡಿಗಳು ಬಂದಾಗ ಮಸೂದೆಯ ಮೇಲೆ ಚರ್ಚೆ, ತಿದ್ದುಪಡಿಗಳ ಮೇಲೆ ಚರ್ಚೆ ಎಲ್ಲವೂ ಒಟ್ಟಿಗೆ ನಡೆಯುತ್ತದೆ. ಬಿಡಿಬಿಡಿಯಾಗಿ ಚರ್ಚೆ ನಡೆಯುವುದಿಲ್ಲ. ಪಾರ್ಲಿಮೆಂಟ್‌ನಲ್ಲಾಗಲೀ, ಕೇರಳಾ ವಿಧಾನ ಸಭೆಯಲ್ಲಾಗಲೀ, ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಾಗಲೀ ಬಿಡಿ ಬಿಡಿಯಾಗಿ ಚರ್ಚೆಯಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮ ಪಕ್ಷದ ಸದಸ್ಯರುಗಳಿಗೆ ಮಾತನಾಡುವ ಹಕ್ಕು ಮೊಟಕಾಗಬಾರದೆಂಬ ಉದ್ದೇಶದಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು : ಈ ಅಧಿವೇಶನ ಕರೆದದ್ದು, ಮೂಲಭೂತವಾಗಿ ಈ ಮಸೂದೆಯ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹಾಗೂ ತೀರ್ಮಾನ ತೆಗೆದುಕೊಳ್ಳಬೇಕೆಂದು. ಅದಕ್ಕೋಸ್ಕರ ಈ ಅಧಿವೇಶನವನ್ನು ಕರೆಯಲಾಗಿದೆ. ಸದನದ ಕಾರ್ಯಕಲಾಪಗಳ ಸಮಿತಿಯಲ್ಲಿ ಈ ಚರ್ಚೆಗೋಸ್ಕರ ಟೈಮ್‌ನ್ನು ಸೀಮಿತ ಮಾಡಿದ್ದೇವೆ. ಆದ್ದರಿಂದ, ಈ ಸದನದ ಕಾರ್ಯಕಲಾಪ ಸಮಿತಿ ಮಾಡಿತಕ್ಕಂಥ ತೀರ್ಮಾನದ ಬಗ್ಗೆ ನಾವು ಟೈಮರ್ ವಿಂಗಡಣೆ ಮಾಡಿರುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒಂದು ಮನವಿ ಅಧ್ಯಕ್ಷರೇ,

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಜಿಲ್ಲಾಪರಿಷತ್ತಿನ ಕೆಲವು ಅಧ್ಯಕ್ಷರುಗಳು ಕಾಂಗ್ರೇಸ್ ಪಕ್ಷದ ನಾಯಕರಾದ ರಾಜೀವ್ ಗಾಂಧಿಯವರನ್ನು ಭೇಟಿ ಮಾಡಿದ್ದಾಗ, ಈ ಮಸೂದೆಯನ್ನು ತಡೆ ಹಿಡಿಯುವುದಕ್ಕೆ ಆದೇಶ ಕೊಡುತ್ತೇನೆಂದು ರಾಜೀವ್ ಗಾಂಧಿಯವರು ಭರವಸೆ ಕೊಟ್ಟಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಟ್ಟರೆ, ಸುಮ್ಮನೆ ಚರ್ಚೆ ಮಾಡುವುದು ತಪ್ಪುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಜನರ ಮನಸ್ಸಿನಲ್ಲಿ ಏನುಭಾವನೆ ಬಂದಿದೆ ಎಂದರೆ, ಈ ತಿದ್ದುಪಡಿ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ರಾಜೀವ್ ಗಾಂಧಿಯವರು ಆದೇಶ ಕೊಡುತ್ತಾರೆಂದು ತಿಳಿದುಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಆದೇಶ ಬಂದಿದೆಯೇ? ಇಲ್ಲಿ ಸುಮ್ಮನೆ ಚರ್ಚೆ ಮಾಡಿಕೊಂಡು ಹೋಗುವುದರ ಬದಲು ಮಾನ್ಯ ರಾಜೀವ್ ಗಾಂಧಿಯವರು ಏನಾದರೂ ಈ ಬಗ್ಗೆ ಸ್ಪಷ್ಟವಾದ ನಿರ್ದೇಶನ ಕೊಟ್ಟಿದ್ದಾರೆ ಅದನ್ನು ಇಲ್ಲಿ ಸರ್ಕಾರದವರು ಇಲ್ಲಿ ತಿಳಿಸಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ.

ಶ್ರೀ ಸಿ. ಬೈರೇಗೌಡ : ಈ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳುವ ಹಾಗಿದ್ದರೆ, ಇದನ್ನು ಇಲ್ಲಿ ಚರ್ಚೆ ಮಾಡಿ ಸಮಯ ಕಳೆಯುವುದರ ಬದಲು ಬೇರೆ ಮಸೂದೆಗಳನ್ನು ತೆಗೆದುಕೊಂಡು ಚರ್ಚೆ ಮಾಡಬಹುದು. ಈ ವಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಆದೇಶವಿದ್ದರೆ, ಅದನ್ನು ತಿಳಿಸಿ ಸುಮ್ಮನೆ ಚರ್ಚೆ ಮಾಡುವ ಬದಲು ಬೇರೆ ವಿಷಯವನ್ನು ತೆಗೆದುಕೊಂಡು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಿದೆ. ನಾನೂ ಅದನ್ನು ಓದಿದ್ದೇನೆ. ಜನತಾದಳದ ಜಿಲ್ಲಾಪರಿಷತ್ತಿನ ಪ್ರೆಸಿಡೆಂಟ್‌ರುಗಳು ಹೋಗಿ ನಮ್ಮ ಕಾಂಗ್ರೇಸ್ ಪಕ್ಷದ ಅಧ್ಯಕ್ಷರಾದ ಮಾನ್ಯ ಪಕ್ಷದ ಅಧ್ಯಕ್ಷರು ನಮ್ಮ ಪಾರ್ಟಿಗೆ ಆದೇಶ ಕೊಡುತ್ತಾರೆ. ಸರ್ಕಾರಕ್ಕೆ ಆದೇಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಹೆಚ್. ಕೌಜಲಗಿ : ಸರ್ಕಾರ ಅಂದರೆ ಒಂದೇ. ಪಕ್ಷ ಅಂದರೂ ಒಂದೇ.

ಶ್ರೀ ಬಿ. ಬಸವಲಿಂಗಪ್ಪ : ಪತ್ರಿಕೆಗಳಲ್ಲಿ ಬಂದಿರುವ ವರದಿಯ ಆಧಾರದ ಮೇಲೆ ಈ ಸಭೆಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸುವುದು ಸರಿಯಲ್ಲ. ಸಭೆಯನ್ನು ತಾವು ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಪಕ್ಷದ ಅಧ್ಯಕ್ಷರಾದ ಮಾನ್ಯ ರಾಜೀವ್ ಗಾಂಧಿಯವರು ಕೊಟ್ಟಿರುವ ಆದೇಶವನ್ನು ನೀವು ತಳ್ಳಿಹಾಕುತ್ತೀರಾ? ಅವರು ಆದೇಶ ಕೊಟ್ಟಿದ್ದಾರೆಂದು ಹೇಳಿ ಜಿಲ್ಲಾಪರಿಷತ್ತಿನ ಗೌರವಾನ್ವಿತ, ೫ ಜನ ಅಧ್ಯಕ್ಷರುಗಳು ಹೇಳಿದ್ದಾರೆ.

ಅಧ್ಯಕ್ಷರು : ಅವರು ಪೂರ್ತಿ ಹೇಳಿ ಮುಗಿಸಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ : ಇದು ನನಗೆ ಸಂತೋಷದ ವಿಷಯ. ಕಾರಣವೆಂದರೆ, ಜನತಾದಳದ ಜಿಲ್ಲಾಪರಿಷತ್ತಿನ ಅಧ್ಯಕ್ಷರುಗಳು ನಮ್ಮ ಪಕ್ಷದ ನಾಯಕರನ್ನು ಬೇಟಿ ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರನ್ನು ಜನತಾದಳದವರೆಂದು ಕರೆಯಬೇಡಿ. ಅವರು ಜಿಲ್ಲಾಪರಿಷತ್ತಿನ ಅಧ್ಯಕ್ಷರುಗಳು ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಾಜೀವ್ ಗಾಂಧಿಯವರ ಮಾತನ್ನು ಧಿಕ್ಕರಿಸಿ ಆಡಳಿತ ನಡೆಸುತ್ತಿದ್ದೀರೆಂದು ಕಾಣುತ್ತದೆ.

ಶ್ರೀ ಬಿ. ಬಸವಲಿಂಗಪ್ಪ : ಸ್ವಾಮಿ, ನನಗೆ ಇವರಿಂದ ಅಂದರೆ ಜನತಾದಳದವರಿಂದ ಬುದ್ಧಿವಾದ ನನಗೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಪೇಪರ್‌ನಲ್ಲಿ ನಾವು ನೋಡಿದ್ದೇವೆ. ಜನತಾ ದಳದ ಜಿಲ್ಲಾ ಪರಿಷತ್ ಅಧ್ಯಕ್ಷರು ಹೋಗಿ ಮಾನ್ಯ ರಾಜೀವ್ ಗಾಂಧಿಯವರನ್ನು ನೋಡಿದ್ದಾರೆ ಎಂದು. ಅಷ್ಟು ಬಿಟ್ಟರೆ ಬೇರೆ ಏನೂ ನನಗೆ ಗೊತ್ತಿಲ್ಲ ಈಗ. ಮಾನ್ಯ ಚಂದ್ರೇಗೌಡರು ದಯವಿಟ್ಟು ಚರ್ಚೆಯನ್ನು ಮುಂದುವರೆಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

Reference to the visit of Madhya Pradesh Legislative Assembly Speaker.

MR. SPEAKER : I am happy to inform the House that Sri Brij Mohan,Mishra Hon'ble Speaker, Madhya Pradesh Vidhana Sabha and his distinguished wife Mrs. Mishra are with us sitting in the distinguished gallery. On bchalf of thc House, I extend a very hearty welcome to them.

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1990ನೇ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್ ಸಮಿತಿಗಳು ಮಂಡಲ ಪಂಚಾಯತ್ ನ್ಯಾಯ ಪಂಚಾಯತ್ ಹಾಗೂ ಇತರೆ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ ಮಸೂದೆಯ ಬಹು ಮುಖ್ಯವಾದ ಅಂಗವನ್ನು ಪ್ರವೇಶ ಮಾಡಿದ್ದೇನೆ. ಬಹಳ ಮುಖ್ಯವಾಗಿ ಮಾನ್ಯ ಮಂತ್ರಿಗಳು ರೆವಲೂಷನ್ ಆಫ್ ಪವರ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. Regarding devolution of powers, it is only the Parliment which has the authority to devolve powers to the State Legislature. State Legislature has no authority to develve its powers to the District or the Zilla Parishats. That was the stage. I was taking up. I want to draw kind attention to Article 246 of the Constitution of India which empowers the State Legislature to legislate so far as the local bodies are concerned. Article 246 Subject matter of laws made by Parliament and by the Legislatures : I quote sub clause (2):

"Not withstanding anything in clause (3), Parliament and subject to clause (1) the legislature of any State also, have power to make laws with respect to any of the matters enumerated in List III in the Seventh Schedule (in this